15	ಗುಲ್ಬರ್ಗಾ	21.55
16	ಹಾಸನ	25.92
17	ಹಾವೇರಿ	12.30
18	ಕಾರವಾರ	2.66
19	ಕೋಲಾರ	30.73
20	ಕೊಪ್ಪಳ	16.25
21	ಕೊಡಗು	4.20
22	ಮಂಡ್ಯ	27.01
23	ಮಂಗಳೂರು	5.77
24	ಮೈಸೂರು	14.82
25	ರಾಯಚೂರು	13.65
26	ರಾಮನಗರ	13.76
27	ಶಿವಮೊಗ್ಗ	4.19
28	ತುಮಕೂರು	51.07
29	ಉಡುಪಿ	3.71
30	ಯಾದಗಿರಿ	11.65
	ಒಟ್ಟು	**499.02**

ಏಕ ತೀರುವಳಿ ಯೋಜನೆ

608 (641) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಏಕ ತೀರುವಳಿ ಯೋಜನೆಯಡಿ ಪಿಕಾರ್ಡ್ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಸರ್ಕಾರದಿಂದ ಅಥವಾ ಸಹಕಾರ ಇಲಾಖೆಯಿಂದ ಯೋಜನೆ ಅನುಷ್ಠಾನಗೊಳಿಸಲು ಅನುಮತಿ ಪಡೆದಿವೆಯೇ;

ಆ) ಅನುಮತಿ ಪಡೆದಿದ್ದಲ್ಲಿ ಪಿಕಾರ್ಡ್ ಬ್ಯಾಂಕುಗಳು ಹಾಗೂ ಜಿಲ್ಲಾ ಸಹಕಾರಿ ಬ್ಯಾಂಕುಗಳ ಮಾಹಿತಿ ನೀಡುವುದು;

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು) :

ಅ) ಕೆ.ಸಿ.ಸಿ. ಬ್ಯಾಂಕ್ ನಿ., ಧಾರವಾಡ, ಹಾಗೂ ಕೆ.ಡಿ.ಸಿ.ಸಿ. ಬ್ಯಾಂಕ್ ನಿ., ಶಿರಸಿ ಈ ಡಿಸಿಸಿ ಬ್ಯಾಂಕುಗಳು ಮತ್ತು ಹಾವೇರಿ ಜಿಲ್ಲೆಯ ಶಿಗ್ಗಾಂವ ಪಿಕಾರ್ಡ್ ಬ್ಯಾಂಕ್ ಮತ್ತು ಹಿರೇಕೆರೂರು ಪಿಕಾರ್ಡ್ ಬ್ಯಾಂಕುಗಳು ಏಕ ಕಾಲಿಕ ತೀರುವಳಿ ಯೋಜನೆ ಅನುಷ್ಠಾನಗೊಳಿಸಲು ಸಹಕಾರ ಸಂಘಗಳ ನಿಬಂಧಕರಿಂದ ಅನುಮತಿ ಪಡೆದಿವೆ.

ಆ) ಧಾರವಾಡ ಕೆ.ಸಿ.ಸಿ. ಬ್ಯಾಂಕ್ ನಿ., ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘಗಳು ಮತ್ತು ಸಂಸ್ಕರಣ ಘಟಕಗಳಿಗೆ ನೀಡಿದ ಸಾಲವು ಅನೇಕ ವರ್ಷಗಳಿಂದ ವಸೂಲಾಗದೇ ಮುದ್ದತ್ತು ಮಾಡಿದ ಸಾಲವಾಗಿ ಅನುತ್ಪಾದಕ ಸಾಲವಾಗಿ ಮುಂದುವರೆದಿರುತ್ತವೆ. ಬ್ಯಾಂಕಿನ ಹಿತದೃಷ್ಟಿಯಿಂದ ಮತ್ತು ಆಡಳಿತ ಮಂಡಳಿ ನಿರ್ಣಯಿಸಿದಂತೆ ಎಲ್ಲಾ ಟಿ.ಎ.ಪಿ.ಸಿ. ಎಂ.ಎಸ್. ಮತ್ತು ಎಲ್ಲಾ ಸಹಕಾರ ಸಂಘಗಳ ಸಂಸ್ಕರಣ ಘಟಕಗಳು ಪಡೆದ ಸಾಲಗಳ ಮೇಲೆ ಆ ಸಾಲ ಮುದ್ದತ್ತು ಮೀರಿದ ದಿನಾಂಕದಿಂದ ಶೇಕಡ 6.5 ರಂತೆ ಬಡ್ಡಿ ಆಕರಣೆ ಮಾಡಿ ಏಕಕಾಲಿಕ ಸಾಲ ತೀರುವಳಿ ಯೋಜನೆಗೆ ಅನುಮತಿಯನ್ನು ದಿನಾಂಕ: 04–09–2012 ರಂದು ನೀಡಲಾಗಿದೆ. ಈ ಸೌಲಭ್ಯವು ವ್ಯಕ್ತಿಗತ ಸಾಲ ಪಡೆದವರಿಗೆ ಅನ್ವಯಿಸಿ ರುವುದಿಲ್ಲ.

ಕೆನರಾ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ನಿ., ಉತ್ತರ ಕನ್ನಡ ಜಿಲ್ಲೆ, ಶಿರಸಿ ಇವರು ಇತರ ಬ್ಯಾಂಕುಗಳೊಂದಿಗೆ ದಾಂಡೇಲಿ ಫೆರೋ ಪೈ.ಲಿ., ಇವರಿಗೆ ನೀಡಿರುವ ಸಾಲಗಳು ಸುಸ್ತಿಯಾಗಿದ್ದು, ಈ ಕಂಪನಿಯ ಚಟುವ ಟಿಕೆಗಳು ಹಲವಾರು ವರ್ಷಗಳಿಂದ ಸ್ಥಗಿತಗೊಂಡಿದ್ದು ಇವುಗಳನ್ನು ಸಿಕ್ ಯುನಿಟ್ ಎಂದು ಘೋಷಣೆ ಮಾಡಿ ಪುನಃಶ್ಚೇತನ ಕಾರ್ಯಕ್ರಮ ಹಾಕಿಕೊಂಡಿದ್ದರೂ ಅದು ಕೂಡ ಸಫಲವಾಗದೇ ಕಂಪನಿಯನ್ನು ಸಮಾಪನೆ ಮಾಡಲಾಗಿದೆ. ಒಂದು ದಶಕದಿಂದ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಕಂಪನಿಯ ಸ್ಥಿರಾಸ್ತಿಯಲ್ಲಿ ಕೊರತೆ ಉಂಟಾಗಿರುವ ಕಾರಣ ಸಾಲ ನೀಡಿದ ಬ್ಯಾಂಕುಗಳ ಏಕ ಕಾಲಿಕ ತಿರುವಳಿ ಯೋಜನೆಯಡಿಯಲ್ಲಿ ಬಾಕಿ ಇರುವ ಸಾಲಗಳಲ್ಲಿ ರಿಯಾಯಿತಿ ನೀಡಿರುತ್ತವೆ. ಅದೇ ರೀತಿಯಾಗಿ ಈ ಬ್ಯಾಂಕಿನ ಆಡಳಿತ ಮಂಡಳಿ ದಿನಾಂಕ: 29–09–2011ರ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ನಿರ್ಣಯಿಸಿದಂತೆ, ಸಮಾಪನೆಗೊಂಡಿರುವ ಈ ಸಂಸ್ಥೆಯಿಂದ ವಸೂಲಾತಿ ಮಾಡುವ ಯಾವುದೇ ಮಾರ್ಗೋಪಾಯ ಇಲ್ಲದ

ಕಾರಣ ಏಕಕಾಲಿಕ ಸಾಲ ತೀರುವಳಿ ಯೋಜನೆಗೆ ಅನುಮತಿಯನ್ನು ದಿನಾಂಕ: 01-03-2012 ರಂದು ನೀಡಿರುತ್ತದೆ.

ಹಾವೇರಿ ಜಿಲ್ಲೆಯ ಶಿಗ್ಗಾಂವ ಪಿಕಾರ್ಡ್ ಬ್ಯಾಂಕ್ ಮತ್ತು ಹಿರೇಕೆರೂರು ಪಿಕಾರ್ಡ್ ಬ್ಯಾಂಕ್‌ಗಳಿಗೆ ಅವುಗಳ ಸ್ವಂತ ಬಂಡವಾಳ ಯೋಜನೆಯ ಸಾಲಗಳಿಗೆ ಶೇಕಡ 5 ರಂತೆ ಬಡ್ಡಿಯನ್ನು ಸುಸ್ತಿ ಸಾಲಗಾರರಿಂದ ವಸೂಲಿ ಮಾಡಲು ಷರತ್ತಿಗೊಳಪಟ್ಟು ಕ್ರಮವಾಗಿ ದಿನಾಂಕ: 22-06-2012 ಹಾಗೂ ದಿನಾಂಕ: 17-08-2012 ರಂದು ಏಕಕಾಲಿಕ ಸಾಲ ತೀರುವಳಿ ಯೋಜನೆಗೆ ಅನುಮತಿ ನೀಡಲಾಗಿದೆ.

ಬಡ್ಡಿಯ ವ್ಯತ್ಯಾಸದ ಸಹಾಯಧನ

609 (642) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಶೇಕಡ 3 ಮತ್ತು 1ರ ಬಡ್ಡಿ ದರದಲ್ಲಿ ನೀಡಿದ ಸಾಲಗಳ ಪೈಕಿ ವಸೂಲಾಗಿರುವ ಸಾಲಗಳ ಬಡ್ಡಿಯ ವ್ಯತ್ಯಾಸದ ಸಹಾಯಧನವನ್ನು ಸರಕಾರವು 2010-11 ಮತ್ತು 2011-12ರ ಸಾಲಿನಲ್ಲಿ ಬ್ಯಾಂಕುಗಳಿಗೆ ಎಷ್ಟು ಮೊತ್ತವನ್ನು ಬಿಡುಗಡೆ ಮಾಡಬೇಕಾಗಿತ್ತು;

ಆ) ಈವರೆಗೆ ಎಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು) :

ಅ) 2010-11ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ರೂ.412.24 ಕೋಟಿಗಳನ್ನು ಬಿಡುಗಡೆ ಮಾಡಬೇಕಿತ್ತು.

2011-12ನೇ ಸಾಲಿನಲ್ಲಿ ರೂ.598.07 ಕೋಟಿಗಳನ್ನು ಬಿಡುಗಡೆ ಮಾಡಬೇಕಿತ್ತು.

ಆ) ಈ ಮೊತ್ತದಲ್ಲಿ ರೂ.847.24 ಕೋಟಿಗಳನ್ನು 2010-11 ಮತ್ತು 2011-12 ನೇ ಸಾಲಿನಲ್ಲಿ ಬಿಡುಗಡೆ ಮಾಡಿದೆ. ಬಾಕಿ ಉಳಿದ ರೂ. 163.07 ಕೋಟಿಗಳನ್ನು 2012-13ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ. ಮೇಲಿನ 2 ವರ್ಷಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಬೇಕಾದ ಮೊತ್ತವನ್ನು ಈವರೆಗೆ ಪೂರ್ಣವಾಗಿ ಬಿಡುಗಡೆ ಮಾಡಿರುವುದರಿಂದ ಈ 2 ಸಾಲುಗಳಿಗೆ